ಬಂದು ಹೋದ. ಇವು ಗಿರಡ್ಡಿಯೊಂದಿಗೆ ನಡೆದ ಕೊನೆಯ ಮೂರು ಭೆಟ್ಟಿಗಳು. ಅವನು ಸಂಯಮ ಕಳೆದುಕೊಂಡಿರಲಿಲ್ಲ, ಆದರೆ ಕೆಲವು ಸಮಸ್ಯೆಗಳ ಸುಳಿಯಲ್ಲಿ ಅತಂತ್ರನಾಗತೊಡಗಿದ್ದ. ಕೇಳಿಸುವುದು ಕಡಿಮೆಯಾಗಿತ್ತು. ಕಿವಿಯಂತ್ರ 'ಭಯಂಕರ ಸೌಂಡ್ ಮಾಡತ್ತೈತಿ' ಎಂದು ತೆಗೆದಿಟ್ಟಿದ್ದ. ಏಕಾಕಿತನ ಅನುಭವಿಸತೊಡಗಿದ್ದ.

ನಮ್ಮದು ಅಪರೂಪದ ಗೆಳೆತನ. ಅವನು ತನ್ನ ಮಿತ್ರಮಂಡಳಿಯನ್ನು ಕೊನೆಯ ವರೆಗೂ ಮರೆಯಲಿಲ್ಲ. ಕೆಲವರು ಅವನ ಬಾಲ್ಯ ಸ್ನೇಹಿತರಾಗಿದ್ದರೂ ಧಾರವಾಡದ ನಂಟನ್ನು ಅವನು ಹೆಚ್ಚು ನಂಬಿದ್ದ, ಹಚ್ಚಿಕೊಂಡಿದ್ದ. ಅವನ ಏಳಿಗೆಗೆ ಬಹುಪಾಲು ಕೊಡುಗೆ ನೀಡಿದ ಶಿಕ್ಷಣ ಸಂಸ್ಥೆಗಳು, ಅಧ್ಯಾಪಕರು, ಚಟುವಟಿಕೆಗಳು, ಕಾರ್ಯಕಲಾಪಗಳು ಇತ್ಯಾದಿ ಧಾರವಾಡದಲ್ಲಿಯೇ ಸಂಭವಿಸಿದ್ದರಿಂದ ಇಲ್ಲಿಯೇ 'ಸರೋಜ' ಮನೆ ಮಾಡಿಕೊಂಡಿದ್ದ. ಏನಿದ್ದರೂ ನಮ್ಮ ಗತಕಾಲ ಎಂದಿಗೂ ಹಳೆಗಾಲವಾಗುವುದಿಲ್ಲ. ಸಾಹಿತಿ, ಬರಹಗಾರರ ಪಾಲಿಗಂತೂ ಅದು ಉಳಿಗಾಲವೇ ಆಗಿರುತ್ತದೆ. ಗಿರಡ್ಡಿ ಬರೆದ ಒಂಬತ್ತು ಸುಂದರ ಲೇಖನಗಳ 'ಹಿಡಿಯದ ಹಾದಿ' ಅವನ ಎತ್ತರ, ಆಳ, ನಡೆ, ನುಡಿ, ನೋವು, ಕನಸು, ಅಪೇಕ್ಷೆ, ಆತಂಕ, ಮುಚ್ಚುಮರೆ ಎಲ್ಲವನ್ನೂ ಬಿಚ್ಚಿ ಹೇಳುವ ಪುಸ್ತಕ. ಅದರ ಅರ್ಪಣೆ ಹೀಗಿದೆ: "ವಿದ್ಯಾರ್ಥಿಜೀವನದ ದಿನಗಳನ್ನು ನಗೆಯ ಸುಗ್ಗಿಯಾಗಿಸಿದ ಮಾದೇವ, ಸೀಬಿ, ಪಿಯೆಮ್ಮ, ಎನ್ನೆಸ್ಸ, ಶೆಟ್ಟಿ, ಇಮರ, ಬೀಟಿ ಮೊದಲಾದ ಪಳ್ಯಂಕರ ಗುಂಪಿಗೆ." ಇಲ್ಲಿಯ ಸಪ್ತ ಪಳ್ಯಂಕರು: ಶಿಗ್ಲಿ ಮಹಾದೇವ, ಚಂದ್ರಶೇಖರ ಪಾಟೀಲ, ಪಿ.ಎಂ. ಹೆಗಡೆ, ಎನ್.ಎಸ್. ಹಿರೇಮಠ, ಸಿದ್ಧಲಿಂಗ ಪಟ್ಟಣಶೆಟ್ಟಿ, ಸೋಮಶೇಖರ ಇಮ್ರಾಪುರ, ಬಿ.ಟಿ. ದೇಸಾಯಿ ಮತ್ತು 'ಮೊದಲಾದ' ಅಷ್ಟಮ ಪಳ್ಯಂಕಗುರು ಸ್ವತಃ ಗಿರಡ್ಡಿ. ಅವನು ಚಾವಿ ಕೊಟ್ಟ ಕೂಡಲೇ ಉಳಿದವರ ಗಡಿಯಾರ ಚಾಲೂ ಆಗುತ್ತಿದ್ದುವು. ಈಗ?

ನಮ್ಮ ಗೋವಿಂದಪ್ಪ ಈಗ ತನ್ನದೇ ಮನೆಯ ಬಾಗಿಲದಲ್ಲಿ ಪ್ರತಿಮೆಯಾಗಿ ಸದಾಕಾಲದ ತನ್ನ ಪುರಾತನ ತುಂಟ ನಗೆ ಬೀರುತ್ತ ನಿಂತಿದ್ದಾನೆ. ಆ ಕಂಚುವಿಗ್ರಹ ಇರುವ ತನಕ ಕಾಯಂ ನಗುತ್ತಲೇ ಇರುತ್ತಾನೆ. ಆ ಮನೆಯ ಕಡೆಗೆ ಹೋದಾಗೊಮ್ಮೆ ರಾಮಾಯಣ ಕಾಲವನ್ನು ನೆನಪಿಸುವ ಭಾಸನ 'ಪ್ರತಿಮಾ' ನಾಟಕ ಕಣ್ಣಿಗೆ ಕಟ್ಟುತ್ತದೆ. ಸರೋಜಾ ಪ್ರತಿಮೆ ಮಾಡಿಸಿ ನಾವು ಸಪ್ತಕರು ಹುಡುಕುತ್ತಿದ್ದ, ಸ್ವತಃ ನಮ್ಮ ಉಡಾಳ ಗುರುವೇ ಕಳೆದುಕೊಂಡಿದ್ದ, ಗೋವಿಂದಲಾಸ್ಯವನ್ನು ನಮಗೆ ನೀಡಿದ್ದಾಳೆ. 'ಅಟ್ಟದ ಮೇಲೆ ಪುಸ್ತಕಗಳ ನಡುವೆ ಕುಳಿತು ನಾನೂ ಅಂಥ ಪುಸ್ತಕವೇ ಆಗಿದ್ದೆ, ನನ್ನನ್ನು ಕಟೆದು, ಮನೆಯ ಹೊರಗೆ ಇಲ್ಲಿ ಚಳಿಮಳೆಯಲ್ಲಿ ಯಾಕೆ ನಿಲ್ಲಿಸಿದ್ದೀ?' ಎಂದು ಅಸಹಾಯಕ ಗಿರಡ್ಡಿ ಸರೋಜಾಳನ್ನು ಕೇಳುತ್ತಿರಬಹುದೆ? ಏನೇ ಆಗಲಿ, ಅವಳ ಕಳಕಳಿಗೆ ಕೃತಜ್ಞತೆ ಹೇಳದಿರಲಾಗದು.

### ಸಿದ್ಧಲಿಂಗ ಪಟ್ಟಣಶೆಟ್ಟಿ

ಕನ್ನಡದ ಪ್ರಮುಖ ಕವಿ, ಕಥೆಗಾರ, ಅಂಕಣಕಾರ ಹಾಗೂ ಸೃಜನಶೀಲ ಅನುವಾದಕ. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಿಂದೀ ಅಧ್ಯಾಪಕರಾಗಿ ನಿವೃತ್ತರು. 85 ಕನ್ನಡ, ಆರು ಹಿಂದೀ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗಿರಿಜವ್ವನ ಮಗ' ಆತ್ಮಕಥನ, 'ನೀನಾ', 'ಔರಂಗಜೇಬ', 'ಪರದೇಸಿ ಹಾಡುಗಳು', 'ನೂರಾರು ಪದ್ಯಗಳು', 'ಪ್ರತೀಕ್ಷೆ', 'ಮತ್ತೆ ಬಂದಿದ್ದಾಳೆ', 'ಅಯಸ್ಕಾಂತ', 'ಇಂದು ರಾತ್ರಿಯ ಹಾಗೆ', 'ಇಷ್ಟು ಹೇಳಿದ ಮೇಲೆ', 'ಅಪರಂಪಾರ' ಮುಂತಾದ 18 ಕಾವ್ಯ, ಮೂರು ಕಥಾಸಂಗ್ರಹ, ಆರು ಅಂಕಣ, 10 ವಿಮರ್ಶೆ, ಒಂಬತ್ತು ಸಂಪಾದನೆ, ಆರು ಅನುವಾದಿತ ಕಾವ್ಯ ಸಂಕಲನ, 18 ಅನುವಾದಿತ ನಾಟಕ ಕೃತಿಗಳನ್ನು ಪಟ್ಟಣಶೆಟ್ಟರು ಇದುವರೆಗೆ ಪ್ರಕಟಿಸಿದ್ದಾರೆ.